**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸತ್ರ ಮೊಕದ್ದಮೆ ನಂಃ **95/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಜಾನಸನ್ ಕಿರಣ್ ಡಿಸೋಜ | ಪಿಡಬ್ಲೂ -13 |
| ತಂದೆಯ ಹೆಸರು | - ಫ್ರಾನ್ಸಿಸ್ ಡಿಸೋಜ | ಸಿಡಬ್ಲೂ -32 |
| ವಯಸ್ಸು | - 46 ವರ್ಷ | |
| ಉದ್ಯೋಗ | - ವೃತ್ತ ನಿರೀಕ್ಷಕರು, ಪುತ್ತೂರು ನಗರ ಪೊಲೀಸ್ ಠಾಣೆ | |
| ವಾಸ ಸ್ಥಳ | - ಪುತ್ತೂರು | |

*(*ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

ದಿನಾಂಕಃ 21-01-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿಃ 10-02-2024 ರಿಂದ 11-06-2024 ರವರೆಗೆ ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ. ಆ ಅವಧಿಯಲ್ಲಿ

ದಿಃ 10-05-2024 ರಿಂದ 22-05-2024 ರವರೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಪ್ರಭಾರೆ ಆರಕ್ಷಕ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿಃ 10-05-2024 ರಂದು ಈ ಪ್ರಕರಣದ ಕಡತವನ್ನು ಫ್ರಾಸಾ.10 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದೆನು. ಅದೇ ದಿನ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ ಅಲ್ಲಿಗೆ ಚಾಸಾ.2, ಚಾಸಾ.3 ಮತ್ತು ಫ್ರಾಸಾ.4 ರವರಿಗೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬರಮಾಡಿಕೊಂಡಿರುತ್ತೇನೆ. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.9 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚರ ಸಮಕ್ಷಮ ಮೇಲೆ ಹೇಳಿದ ಶವಗಾರದಲ್ಲಿ ಇರಿಸಿದ್ದ ಶ್ರೀಮತಿ ಕನಕ ಕೋಂ ಲೇಟ್ ದೇವರಾಜ್ ರವರ ಶವ ತನಿಖೆಯನ್ನು ಬೆಳಿಗ್ಗೆ 9 ಗಂಟೆಯಿಂದ 11.30 ಗಂಟೆಯವರೆಗೆ ನಡೆಸಿ ಆ ಬಗ್ಗೆ ಶವ ಪಂಚನಾಮೆಯನ್ನು ಜರುಗಿಸಿದ್ದೆನು. ಸದರಿ ಶವಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು. ಶವತನಿಖಾ ಕಾಲಕ್ಕೆ ಮೃತಳ ಮೈಮೇಲೆ ಕಂಡುಬಂದಂತಹ ಗಾಯಗಳು ಮತ್ತು ಬಟ್ಟೆಗಳ ವಿವರಗಳನ್ನು ಶವ ತನಿಖಾ ವರದಿಯಲ್ಲಿ ನಮೂದು ಮಾಡಿದ್ದೇನೆ.

3. ಶವ ತನಿಖಾ ಕಾಲಕ್ಕೆ ಮೃತಳ ರಕ್ತ ಸಂಬಂಧಿಕರಾದ ಚಾಸಾ.3 ಮತ್ತು ಪ್ರಾಸಾ.4 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ ಮತ್ತು ಆ ಸಮಯದಲ್ಲಿ ಪ್ರಾಸಾ.11 ರವರು ನನ್ನ ಆದೇಶದ ಮೇರೆಗೆ ತಮ್ಮ ವಿವೋ ಕಂಪನಿಯ ಮೊಬೈಲಿನಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.3 ಮತ್ತು ಪಿ.4 ಎಂದು ಗುರುತಿಸಲಾಗಿರುತ್ತದೆ.

4. ಶವ ಪರೀಕ್ಷೆಯ ನಂತರ ಮೃತಳ ಮರಣೋತ್ತರ ಪರೀಕ್ಷೆಯನ್ನು ನಡೆಸುವಂತೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮನವಿಯನ್ನು ಫಾರಂ 146 ರೊಂದಿಗೆ ಸಲ್ಲಿಸಿದ್ದೆನು. ಸದರಿ ಮನವಿ ಮತ್ತು ಫಾರಂ 146 ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.18 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.18(ಸಿ) ಎಂದು ಗುರುತಿಸಲಾಯಿತು.

5. ಮೃತಳ ಮೈಮೇಲೆ ಕಿತ್ತಲೆ ಬಣ್ಣದ ನೀಲಿ ಬಣ್ಣದ ಹೂವುಗಳ ಡಿಸೈನ್ ಇರುವ ಟಾಪ್, ನೀಲಿ ಬಣ್ಣದ ಸೀರೆ, ಕುತ್ತಿಗೆಯಲ್ಲಿ ಕಂದುಬಣ್ಣದ ವೇಲ್ ಮತ್ತು ಎರಡು ಕಾಲುಗಳಲ್ಲಿದ್ದ ಬೆಳ್ಳಿಯಂತಹ ಕಾಲುಂಗರಗಳು ಇದ್ದವು. ಅವುಗಳನ್ನು ಮರಣೋತ್ತರ ಪರೀಕ್ಷಾ ಕಾಲಕ್ಕೆ ಸಂಗ್ರಹಿಸಿ ಕೊಡುವಂತೆ ವೈದ್ಯರಿಗೆ ನೀಡಿದ ಮನವಿಯಲ್ಲಿ ಕೋರಿದ್ದೆನು.

6. ಅದೇ ದಿನ ಚಿಕ್ಕಮಗಳೂರು ನಗರದ ಐ.ಜಿ.ರಸ್ತೆಯಲ್ಲಿರುವ

ಸುಪ್ರೀಂ ಮೆಡಿಕಲ್ ಹತ್ತಿರ ಕೃತ್ಯ ನಡೆದಿದ್ದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸದರಿ ಸ್ಥಳಕ್ಕೆ ಫ್ರಾಸಾ.3 ಮತ್ತು 7 ರವರಿಗೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬರಮಾಡಿಕೊಂಡಿರುತ್ತೇನೆ. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಸಿ) ಎಂದು ಗುರುತಿಸಲಾಯಿತು. ಸದರಿ ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ ಸೀನ್ ಆಫ್ ಕ್ರೈಂ ಅಧಿಕಾರಿಗಳನ್ನು ಬರಮಾಡಿಕೊಂಡಿದ್ದೆನು.

7. ಸದರಿ ಸ್ಥಳದಲ್ಲಿ ಹಾಜರಿದ್ದ ಫ್ರಾಸಾ.1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳವನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಪರಿಶೀಲಿಸಿದ್ದೇನೆ. ಸದರಿ ಸ್ಥಳದಲ್ಲಿ ಕೃತ್ಯಕ್ಕೆ ಸಂಬಂಧಿಸಿದ ರಕ್ತದ ನಿಶಾನೆಗಳನ್ನು ಸೋಕೋ ಅಧಿಕಾರಿಗಳು ಮೇಲೆ ಹೇಳಿದ ಪಂಚರ ಸಮಕ್ಷಮ ಸಂಗ್ರಹಿಸಿ ಎರಡು ಖಾಕಿ ಕವರುಗಳಲ್ಲಿ ಹಾಕಿ ನೀಡಿದರು ಮತ್ತು ಒಂದು ಕಂಟ್ರೋಲ್ ಸ್ವಾಬ್‌ನ್ನು ಖಾಕಿ ಕವರಿನಲ್ಲಿ ಹಾಕಿ ನೀಡಿದರು. ಅವುಗಳನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಪ್ಯಾಕ್ ಮಾಡಿ ಅರಗಿನಿಂದ 'ಪಿ' ಎಂಬ ಸೀಲ್ ಮಾಡಿ ಅವುಗಳ ಮೇಲೆ ಕೇಸಿನ ವಿವರ ಮತ್ತು ನನ್ನ ಮತ್ತು ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಿ ಅವುಗಳನ್ನು ಅಮಾನತು ಪಡಿಸಿಕೊಂಡೆನು.

8. ಆ ಬಗ್ಗೆ ಮಹಜರನ್ನು ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ.

ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಪಂಚರ ಮತ್ತು ಫ್ರಾಸಾ.1 ರವರ ಸಹಿಗಳನ್ನು ಪಡೆದಿದ್ದೇನೆ. ಸದರಿ ಪಂಚನಾಮೆಯ ಸಮಯದಲ್ಲಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿರುತ್ತೇನೆ ಮತ್ತು ಫೋಟೋವನ್ನು ತೆಗೆಸಿದ್ದೇನೆ. ಸದರಿ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದೆ.

9. ಮೇಲೆ ಹೇಳಿದಂತೆ ಅಮಾನತು ಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ: 64/2024 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಾಲುಪಟ್ಟಿಯನ್ನು ನಿಪಿ.27 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು.

10. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ರಿಂದ 3 ಎಂದು ಗುರುತಿಸಲ್ಪಟ್ಟಿರುವ ಸಾದಾ ಬ್ಯಾಂಡೇಜ್ ಹತ್ತಿಯ ಬಟ್ಟೆ, ರಕ್ತವನ್ನು ಸಂಗ್ರಹಿಸಿದ ಎರಡು ಬ್ಯಾಂಡೇಜ್ ಹತ್ತಿಯ ಬಟ್ಟೆಗಳು ಮತ್ತು ಅವುಗಳ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ

ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ.1 ರಿಂದ 3 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಮು.ಮಾ.1(ಇ), ಮು.ಮಾ.2(ಇ) ಮತ್ತು ಮು.ಮಾ.3(ಇ) ಎಂದು ಗುರುತಿಸಲಾಯಿತು.

11. ಅದೇ ದಿನ ಆರೋಪಿಯ ಪತ್ತೆಗಾಗಿ ಚಾಸಾ.24 ರಿಂದ ಚಾಸಾ.26 ರವರನ್ನು ನೇಮಿಸಿದ್ದೆನು. ಅದರಂತೆ ಸದರಿಯವರು ಅದೇ ದಿನ ಆರೋಪಿಯನ್ನು ಚಿಕ್ಕಮಗಳೂರು ನಗರದ ರಾಮನಹಳ್ಳಿ ಬಸ್ ನಿಲ್ದಾಣದ ಹತ್ತಿರ ಮಧ್ಯಾಹ್ನ 1.45 ಗಂಟೆಗೆ ವಶಕ್ಕೆ ಪಡೆದು ಆತನನ್ನು ಮಧ್ಯಾಹ್ನ 2 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆ ಬಗ್ಗೆ ಚಾಸಾ.24 ರವರು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.28 ಎಂದು, ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.28(ಎ) ಎಂದು ಗುರುತಿಸಲಾಯಿತು.

12. ನಂತರ ನಾನು ದಸ್ತಗಿರಿ ಕ್ರಮ ಅನುಸರಿಸಿ ಆರೋಪಿಯನ್ನು ಬಂಧಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ಸದರಿ ಹೇಳಿಕೆಯಲ್ಲಿ ಆರೋಪಿಯು ತಾವು ನನ್ನ ಜೊತೆ ಬಂದರೆ ನಾನು ಹೆಂಗಸನ್ನು ಕೊಲೆ ಮಾಡಿದ ಸ್ಥಳವನ್ನು ಮತ್ತು ಕೃತ್ಯಕ್ಕೆ ಉಪಯೋಗಿಸಿದ ವಸ್ತುವನ್ನು ತೋರಿಸುತ್ತೇನೆ ಎಂದು ನುಡಿದಿರುತ್ತಾನೆ. ಆರೋಪಿಯ ಸ್ವಇಚ್ಛಾ ಹೇಳಿಕೆಯ ಸದರಿ ಭಾಗವನ್ನು ನಿಪಿ.29 ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಎ) ಮತ್ತು ಆರೋಪಿಯ ಸಹಿಯನ್ನು

ನಿಪಿ.29(ಬಿ) ಎಂದು ಗುರುತಿಸಲಾಯಿತು.

13. ನಂತರ ಆರೋಪಿಯ ಸ್ವಇಚ್ಛಾ ಹೇಳಿಕೆಯ ಮೇರೆಗೆ ಪಂಚನಾಮೆ ಕ್ರಮವನ್ನು ಜರುಗಿಸಲು ಚಾಸಾ.7 ಮತ್ತು ಫ್ರಾಸಾ.5 ರವರಿಗೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಠಾಣೆಗೆ ಬರಮಾಡಿಕೊಂಡಿರುತ್ತೇನೆ. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು.

14. ನಂತರ ಆರೋಪಿ ನನ್ನನ್ನು ಮತ್ತು ಮೇಲೆ ಹೇಳಿದ ಪಂಚರನ್ನು ಚಿಕ್ಕಮಗಳೂರು ನಗರದ ಐ.ಜಿ.ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ ಹತ್ತಿರಕ್ಕೆ ಕರೆದುಕೊಂಡು ಹೋಗಿ ಸದರಿ ಸ್ಥಳದಲ್ಲಿ ಹಿಂದಿನ ದಿನ ಅಂದರೆ ಅದೇ ದಿನ ಬೆಳಗಿನ ಜಾವ 2.30 ಗಂಟೆ ಸಮಯದಲ್ಲಿ ರಸ್ತೆ ಬದಿಯಲ್ಲಿ ಮಲಗಿದ್ದ ಹೆಂಗಸಿನ ತಲೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ ಸ್ಥಳ ಅದೇ ಎಂದು ತೋರಿಸಿದನು. ನಂತರ ಮೇಲೆ ಹೇಳಿದ ಪಂಚರ ಸಮಕ್ಷಮ ಆರೋಪಿ ಸದರಿ ಸ್ಥಳದಲ್ಲಿ ಬಿದ್ದಿದ್ದ ಕೆಲವು ಪ್ಲಾಸ್ಟಿಕ್ ಚೀಲಗಳು ಮತ್ತು ಬಟ್ಟೆಗಳನ್ನು ಸರಿಸಿ ಅಲ್ಲಿ ಇಟ್ಟಿದ್ದ ಒಂದು ಸೈಜ್ ಕಲ್ಲನ್ನು ತೋರಿಸಿ ಅದೇ ಕಲ್ಲಿನಿಂದ ತಾನು ಮೇಲೆ ಹೇಳಿದಂತೆ ಮಹಿಳೆಯ ತಲೆಗೆ ಜಜ್ಜಿ ಕೊಲೆ ಮಾಡಿದ್ದಾಗಿ, ನಂತರ ಅದನ್ನು ಯಾರಿಗೂ ಕಾಣದಂತೆ ಅಲ್ಲಿ ಮುಚ್ಚಿಟ್ಟಿದ್ದಾಗಿ ನುಡಿದು ಹಾಜರುಪಡಿಸಿದನು. ಸದರಿ ಕಲ್ಲನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದು 5 ವರೆ ಇಂಚು

ಎತ್ತರ, 9 ಇಂಚು ಉದ್ದ ಮತ್ತು 7 ವರೆ ಇಂಚು ಅಗಲ ಇರುವ ಮನೆ ಕಟ್ಟಲು ಉಪಯೋಗಿಸುವ ಸೈಜ್ ಕಲ್ಲು ಆಗಿತ್ತು. ಅದರ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು ಇರುವುದು ಕಂಡುಬಂತು. ಪಕ್ಕದಲ್ಲಿದ್ದ ಹಣ್ಣಿನ ಅಂಗಡಿಯಿಂದ ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ತರಿಸಿ ಸದರಿ ಕಲ್ಲನ್ನು ತೂಕ ಮಾಡಿ ನೋಡಲಾಗಿ ಅದು 17 ಕೆ.ಜಿ. ತೂಕ ಇರುವುದು ಕಂಡುಬಂತು. ಸದರಿ ಕಲ್ಲನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ಕಟ್ಟಿ ಅದರ ಮೇಲೆ 'ಪಿ' ಎಂಬ ಸೀಲನ್ನು ಹಾಕಿ ಪ್ಯಾಕ್ ಮಾಡಿ ಅಮಾನತು ಪಡಿಸಿಕೊಂಡೆನು. ಅದರ ಮೇಲೆ ಕೇಸಿನ ವಿವರ, ಪಂಚರ, ಆರೋಪಿಯ ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿದೆನು.

15. ಆ ಬಗ್ಗೆ ಮಧ್ಯಾಹ್ನ 3.30 ರಿಂದ 4.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಪಂಚರ ಮತ್ತು ಆರೋಪಿಯ ಸಹಿಗಳನ್ನು ಪಡೆದಿದ್ದೇನೆ. ಸದರಿ ಪಂಚನಾಮೆಯ ಸಮಯದಲ್ಲಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿರುತ್ತೇನೆ ಮತ್ತು ಫೋಟೋಗಳನ್ನು ತೆಗೆಸಿದ್ದೇನೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು,

ಅವುಗಳನ್ನು ಈಗಾಗಲೇ ನಿಪಿ.12 ಮತ್ತು ಪಿ.13 ಎಂದು ಗುರುತಿಸಲಾಗಿದೆ. ಸದರಿ ಫೋಟೋಗಳಲ್ಲಿ ನನ್ನೊಂದಿಗೆ ಚಾಸಾ.7, ಫ್ರಾಸಾ.5, ಆರೋಪಿಯ ಮತ್ತು ಆರೋಪಿ ತೋರಿಸಿ ಹಾಜರುಪಡಿಸಿದ ಕಲ್ಲಿನ ಇರುವಿಕೆ ಕಂಡುಬರುತ್ತದೆ.

16. ಮೇಲೆ ಹೇಳಿದಂತೆ ಅಮಾನತು ಪಡಿಸಿಕೊಂಡ ಕಲ್ಲನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 65/2024 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಾಲುಪಟ್ಟಿಯನ್ನು ನಿಪಿ.30 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.30(ಎ) ಎಂದು ಗುರುತಿಸಲಾಯಿತು.

17. ಸದರಿ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.6 ಎಂದು ಗುರುತಿಸಲ್ಪಟ್ಟಿರುವ ಒಂದು ಸೈಜ್ ಕಲ್ಲನ್ನು ನೋಡಿ ಆ ದಿನ ಆರೋಪಿ ತಾನು ಕೃತ್ಯಕ್ಕೆ ಬಳಸಿದ್ದಾಗಿ ನುಡಿದು ಹಾಜರುಪಡಿಸಿದ ಕಲ್ಲು ಅದೇ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮು.ಮಾ.6 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.6(ಸಿ) ಎಂದು ಗುರುತಿಸಲಾಯಿತು.

18. ನಂತರ ಅದೇ ದಿನ ಚಾಸಾ.24 ರಿಂದ 26 ರವರ

ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ನಂತರ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸಿಬ್ಬಂದಿ ಮೂಲಕ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

19. ದಿಃ 11-05-2024 ರಂದು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.2 ಮತ್ತು ಚಾಸಾ.10 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

20. ದಿಃ 13-05-2024 ರಂದು ಚಿಕ್ಕಮಗಳೂರು ನಗರಸಭೆಗೆ ಮನವಿಯನ್ನು ಸಲ್ಲಿಸಿ ಕೃತ್ಯ ನಡೆದ ಸ್ಥಳದ ಬಗ್ಗೆ ದಾಖಲೆಗಳನ್ನು ನೀಡುವಂತೆ ಕೋರಿದ್ದೆನು. ಸದರಿ ಮನವಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.31 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.31(ಎ) ಎಂದು ಗುರುತಿಸಲಾಯಿತು.

21. ಅದೇ ದಿನ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಗೆ ಮನವಿಯನ್ನು ಸಲ್ಲಿಸಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡುವಂತೆ ಕೋರಿದ್ದೆನು. ಸದರಿ ಮನವಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮನವಿಯನ್ನು ಈಗಾಗಲೇ ನಿಪಿ.15 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು.

22. ಅದೇ ದಿನ ಚಿಕ್ಕಮಗಳೂರು ಮೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರಿಗೆ ಮನವಿಯನ್ನು ಸಲ್ಲಿಸಿ

ದಿಃ 10-05-2024 ರಂದು ಬೆಳಗಿನ ಜಾವ 2 ರಿಂದ 3 ಗಂಟೆ ವೇಳೆಯಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿದ್ದೆನು. ಸದರಿ ಮನವಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.32 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.32(ಎ) ಎಂದು ಗುರುತಿಸಲಾಯಿತು.

23. ಅದೇ ದಿನ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಮನವಿಯನ್ನು ಸಲ್ಲಿಸಿ ಮೃತಳ ಮರಣೋತ್ತರ ಪರೀಕ್ಷಾ ವರದಿಯನ್ನು ನೀಡುವಂತೆ ಕೋರಿದ್ದೆನು. ಸದರಿ ಮನವಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.33 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.33(ಎ) ಎಂದು ಗುರುತಿಸಲಾಯಿತು.

24. ಮೃತಳ ಮರಣೋತ್ತರ ಪರೀಕ್ಷಾ ಸಮಯದಲ್ಲಿ ವೈದ್ಯರು ಸಂಗ್ರಹಿಸಿ ನೀಡಿದ್ದ ಮೃತಳ ಮೈಮೇಲೆ ಇದ್ದ ಸೀಲ್ ಮಾಡಿದ ಸ್ಥಿತಿಯಲ್ಲಿದ್ದ ಬಟ್ಟೆಗಳು ಮತ್ತು ಗಾಸ್ ಪೀಸಿನಲ್ಲಿ ಸಂಗ್ರಹಿಸಿದ್ದ ಮೃತಳ ರಕ್ತವನ್ನು ದಿಃ 20-05-2024 ರಂದು ಚಾಸಾ.22 ರವರು ತಂದು ನನ್ನ ಮುಂದೆ ಹಾಜರುಪಡಿಸಿದ್ದ ಮೇರೆಗೆ ಅವುಗಳನ್ನು ಸ್ವೀಕರಿಸಿ ಠಾಣಾ ಮಾಲು ಪಟ್ಟಿ ಸಂಖ್ಯೆ 72/2024 ರಲ್ಲಿ ಅಳವಡಿಸಿಕೊಂಡಿದ್ದೇನೆ. ಸದರಿ ಮಾಲು ಪಟ್ಟಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.34 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.34(ಎ) ಎಂದು ಗುರುತಿಸಲಾಯಿತು. ಮೃತಳ ಮೈಮೇಲೆ

ಇದ್ದ ಸದರಿ ಬಟ್ಟೆಗಳನ್ನು ನಾನು ಶವ ತನಿಖಾ ಕಾಲಕ್ಕೆ ನೋಡಿದ್ದೆನು, ಹಾಗಾಗಿ ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ. 4 ಮತ್ತು 5 ಎಂದು ಗುರುತಿಸಲ್ಪಟ್ಟಿರುವ ಟಾಪ್ ಮತ್ತು ಸೀರೆಯನ್ನು ನೋಡಿ ಅವುಗಳು ಮೃತಳ ಮೈಮೇಲೆ ಇದ್ದ ಬಟ್ಟೆಗಳು ಎಂದು ನುಡಿದಿರುತ್ತಾರೆ.

25. ಈ ಪ್ರಕರಣದಲ್ಲಿ ಅಮಾನತುಪಡಿಸಿಕೊಳ್ಳಲಾಗಿದ್ದ 7 ವಸ್ತುಗಳನ್ನು ತಜ್ಞರ ಪರೀಕ್ಷೆಗಾಗಿ ಆರ್.ಎಫ್.ಎಸ್.ಎಲ್. ಮಂಗಳೂರುರವರಿಗೆ ಚಾಸಾ.23 ರವರೊಂದಿಗೆ ದಿಃ 21-05-2024 ರಂದು ಕಳುಹಿಸಿಕೊಟ್ಟಿದ್ದೆನು. ಅದರೊಂದಿಗೆ ಮನವಿ, ನನ್ನ ಸಹಿ ಮತ್ತು ಮಾದರಿ ಸೀಲ್ ಇರುವ ಪ್ರಪತ್ರವನ್ನು ಕಳುಹಿಸಿಕೊಟ್ಟಿದ್ದೆನು.

26. ದಿಃ 10-05-2024 ರಂದು ಚಾಸಾ.20 ಪ್ರಮೋದ್ ರವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಕರ್ತವ್ಯನಿರತ ವೈದ್ಯಾಧಿಕಾರಿಗಳಿಗೆ ನೀಡಿದ್ದಾರೆ ಎನ್ನಲಾದ ಮನವಿಯನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಅದನ್ನು ಚಾಸಾ.20 ರವರು ಮೃತಳ ಶವವನ್ನು ಮುಂದಿನ ಕ್ರಮ ಜರುಗಿಸುವವರೆಗೆ ಶವಗಾರದಲ್ಲಿಡಲು ಅನುಮತಿ ಕೋರಿ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಸಲ್ಲಿಸಿರುವುದಾಗಿ ನುಡಿದ ಮೇರೆಗೆ ಅದನ್ನು ನಿಪಿ.35 ಎಂದು ಗುರುತಿಸಲಾಯಿತು.

27. ನಂತರ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ

ಆರಕ್ಷಕ ನಿರೀಕ್ಷಕರಾದ ಚಾಸಾ.33 ರವರು ರಜೆಯಿಂದ ವಾಪಸಾದ ಮೇರೆಗೆ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಅವರಿಗೆ ದಿಃ 22-05-2024 ರಂದು ವಹಿಸಿಕೊಟ್ಟಿದ್ದೆನು. ಈ ದಿನ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿಯ ಪರವಾಗಿಃ **LADCS** ನ **Deputy Chief Defense counsel** ಆದ ಶ್ರೀ ಎನ್.ಡಿ ವಕೀಲರಿಂದಃ

28. ನಿಮಗೆ ಮಾನಸಿಕ ಆರೋಗ್ಯ ಕಾಯ್ದೆ ಬಗ್ಗೆ ತರಬೇತಿಯಾಗಿದೆಯೇ ಎಂದರೆ ಸಾಕ್ಷಿ ಬೆಸಿಕ್ ಟ್ರೇನಿಂಗ್ ನಲ್ಲಿ ಆ ಬಗ್ಗೆ ತಿಳಿಸಲಾಗಿತ್ತು, ಆದರೆ ವಿಶೇಷವಾಗಿ ಆ ಬಗ್ಗೆ ತರಬೇತಿ ನೀಡಿಲ್ಲ ಎನ್ನುತ್ತಾರೆ. ಸಿಆರ್.ಪಿ.ಸಿ ಕಲಂ 328 ಮತ್ತು 329 ರ ಬಗ್ಗೆ ನಿಮಗೆ ತರಬೇತಿಯಾಗಿದೆ ಎಂದರೆ ಸಾಕ್ಷಿ ಬೆಸಿಕ್ ಟ್ರೇನಿಂಗ್ ನಲ್ಲಿ ಆ ಬಗ್ಗೆ ತಿಳಿಸಲಾಗಿದೆ ಎನ್ನುತ್ತಾರೆ.

29. ಚಿಕ್ಕಮಗಳೂರಿನ ಹಿರಿಯ ಸಿವಿಲ್ ಮತ್ತು ಸಿಜೆಎಂ ನ್ಯಾಯಾಧೀಶರವರು ಕ್ರಿಮಿನಲ್ ಮಿಸ್ 307/2023 ರಲ್ಲಿ ಮಾಡಿದ್ದ ಆದೇಶದ ಮೇರೆಗೆ ಆರೋಪಿಯನ್ನು ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸುವಂತೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣಾಧಿಕಾರಿಗೆ

ಸೂಚಿಸಲಾಗಿತ್ತು ಮತ್ತು ಮಾನಸಿಕ ಆರೋಗ್ಯ ಕಾಯ್ದೆ ಅಡಿಯಲ್ಲಿ ಆತ ಚಿಕಿತ್ಸೆಪಡೆದುಕೊಂಡ ಬಗ್ಗೆ ದಾಖಲೆಗಳು ಸದರಿ ಠಾಣೆಯಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ದಾಖಲೆಗಳು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಇದ್ದರೂ ಸಹ ನೀವು ಆ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

30. ಆರೋಪಿಯನ್ನು ಚಾಸಾ.24 ರವರು ವಶಕ್ಕೆ ಪಡೆದು ನಿಮ್ಮ ಮುಂದೆ ಹಾಜರುಪಡಿಸಿದ್ದಾಗಿ ಹೇಳಿದ್ದೀರಿ ಆ ಸಮಯದಲ್ಲಿ ಆರೋಪಿಯ ವರ್ತನೆ ಅಸಹಜವಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತನ ವರ್ತನೆ ಸಹಜವಾಗಿತ್ತು ಎನ್ನುತ್ತಾರೆ. ನೀವು ಹೇಳಿದಂತೆ ಚಾಸಾ.24 ರವರು ಆರೋಪಿಯನ್ನು ವಶಕ್ಕೆ ಪಡೆದು ನಿಮ್ಮ ಮುಂದೆ ಹಾಜರುಪಡಿಸಿಲ್ಲ ಸಾರ್ವಜನಿಕರೇ ಆತನನ್ನು ಹಿಡಿದು ಆತನನ್ನು ಠಾಣೆಗೆ ಕರೆತಂದಿದ್ದರು ಎಂದರೆ ಸರಿಯಲ್ಲ. ಸಾರ್ವಜನಿಕರು ಆರೋಪಿಯನ್ನು ಹಿಡಿದು ನಿಮ್ಮ ಠಾಣೆಯ ಪೊಲೀಸರ ವಶಕ್ಕೆ ನೀಡಿದ್ದರೂ ಸಹ ಅಕ್ರಮ ಬಂಧನವಾಗುತ್ತದೆ ಎನ್ನುವ ಉದ್ದೇಶದಿಂದ ನಿಮ್ಮ ಅಧೀನ ಅಧಿಕಾರಿಗಳಿಂದ ಆತನನ್ನು ವಶಕ್ಕೆ ಪಡೆಯಲಾಗಿದೆ ಎಂದು ಸುಳ್ಳು ವರದಿಯನ್ನು ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ.

31. ದಿಃ 09-05-2024 ರಂದು ರಾತ್ರಿ 11.30 ಗಂಟೆ ಸುಮಾರಿಗೆ ಆರೋಪಿ ಮೃತಳನ್ನು ಕುರಿತು ಕಾಲು ಒತ್ತು ಎಂದು ಕೇಳಿ ಗಲಾಟೆಯಾದ ಬಗ್ಗೆ ಸಾರ್ವಜನಿಕರಿಂದ ಅಥವಾ ಬೀಟ್

ಪೊಲೀಸರಿಂದ ಮಾಹಿತಿ ಬಂದಿತ್ತಾ ಎಂದರೆ ಸಾಕ್ಷಿ ನನಗೆ ಬಂದಿಲ್ಲ ಎನ್ನುತ್ತಾರೆ. ಆ ಬಗ್ಗೆ ಕಂಟ್ರೋಲ್ ರೂಂನಿಂದ ಮಾಹಿತಿ ಬಂದಿತ್ತಾ ಎಂದರೆ ಸಾಕ್ಷಿ ನನಗೆ ಬಂದಿಲ್ಲ ಎನ್ನುತ್ತಾರೆ. ಆ ಬಗ್ಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಮಾಹಿತಿ ಬಂದಿತ್ತಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

32. ಘಟನೆಯ ಬಗ್ಗೆ ಮೊದಲು ನಿಮಗೆ ಯಾರಿಂದ ಮಾಹಿತಿ ಬಂತು ಎಂದರೆ ಸಾಕ್ಷಿ ಸಾರ್ವಜನಿಕರಿಂದ ಬಂದಿದ್ದಾಗಿ ಹಿಂದಿನ ತನಿಖಾಧಿಕಾರಿಗಳಾದ ಪ್ರಾಸಾ.10 ರವರು ತಿಳಿಸಿದ್ದರು ಎನ್ನುತ್ತಾರೆ. ನಿಪಿ.35 ರ ಪ್ರಕಾರ ಮೃತಳು ಅಪರಿಚಿತ ಮಹಿಳೆ ಎಂದು, ಹಲ್ಲೆ ಮಾಡಿದ ವ್ಯಕ್ತಿ ಆರೋಪಿ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಆ ರೀತಿ ಬಂದ ಮಾಹಿತಿ ಮೇರೆಗೆ ಆಗಿನ ಠಾಣಾಧಿಕಾರಿಗಳಿಗೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಮೃತ ಪಟ್ಟ ಮಹಿಳೆ ಯಾರೆಂದು ಆಕೆ ಗೊತ್ತಿಲ್ಲದ ಕಾರಣ ಮಾಡಿಲ್ಲ ಎನ್ನುತ್ತಾರೆ.

33. ಘಟನಾ ಸ್ಥಳದ ಪಕ್ಕದಲ್ಲಿ ರಸ್ತೆಯ ವಿಭಜಕ ಇದ್ದು ಅದರ ಎತ್ತರವನ್ನು ನಿಪಿ.5 ಪಂಚನಾಮೆಯಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಸದರಿ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಮು.ಮಾ.6 ಕಲ್ಲು ಸ್ಥಳದಲ್ಲಿ ಸಹಜವಾಗಿ ಬಿದ್ದಿರುವುದು ಕಂಡುಬಂತು ಎಂದರೆ ಸರಿಯಲ್ಲ.

34. ಪ್ರಾಸಾ.2 ರವರು ನಿಮಗೆ ನೀಡಿದ್ದಾರೆ ಎಂದು ಹೇಳಲಾದ

ಹೇಳಿಕೆಯಲ್ಲಿ ತಾವು ಅಂಬ್ಯುಲೇನ್ಸಿಗೆ ಕರೆ ಮಾಡಿದ್ದಾಗಿ, ನಂತರ ಅಂಬ್ಯುಲೇನ್ಸಿನಲ್ಲಿ ಮೃತಳು ಕರೆದುಕೊಂಡು ಹೋಗಿದ್ದಾಗಿ, ಫ್ರಾಸಾ.1 ರವರಿಗೆ ಫೋನ್ ಮಾಡಿ ವಿಚಾರವನ್ನು ತಿಳಿಸಿದ್ದಾರೆ ಅದಕ್ಕೆ ಸಂಬಂಧಿಸಿದ ಆಂಬ್ಯುಲೇನ್ಸ ಬಂದು ಹೋದ ಬಗ್ಗೆ ದಾಖಲೆ, ಕಾಲ್ ವಿವರಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಕಾರಣ ಅದರ ಅವಶ್ಯಕತೆ ಕಂಡುಬಂದಿಲ್ಲ ಎನ್ನುತ್ತಾರೆ.

35. ಪೊಲೀಸರು ಮೊದಲು ಯಾವಾಗ ಸ್ಥಳಕ್ಕೆ ಹೋದರು ಎಂದು ಕಡತದಲ್ಲಿ ನಮೂದಾಗಿದೆಯೇ ಎಂದರೆ ಸಾಕ್ಷಿ ನಾನು ಆ ಬಗ್ಗೆ ಪರಿಶೀಲಿಸಿಲ್ಲ ಎನ್ನುತ್ತಾರೆ. ಸ್ಥಳದಲ್ಲಿ ಇದ್ದ ಬೇರೆ ಬಿಕ್ಷುಕರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಸ್ಥಳದಲ್ಲಿ ಬೇರೆ ಯಾವುದೇ ಬಿಕ್ಷುಕರು ಇರಲಿಲ್ಲ ಎನ್ನುತ್ತಾರೆ. ಆರೋಪಿ ಬೈಪೋಲರ್ ಡಿಸ್ ಅರ್ಡರ್ ನಿಂದ ಬಳಲುತ್ತಿದ್ದು ನೀವು ಆ ಬಗ್ಗೆ ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದವರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಕಾರಣ ಆ ಬಗ್ಗೆ ಯಾರು ತಿಳಿಸಿಲ್ಲ ಎನ್ನುತ್ತಾರೆ.

36. ನಿಪಿ.6 ಫೋಟೋದಲ್ಲಿ ನೀವು ಹೇಳಿದಂತೆ ಸ್ಥಳದಲ್ಲಿದ್ದ ರಕ್ತದ ಕಲೆಗಳನ್ನು ಮು.ಮಾ.2 ಮತ್ತು 3 ರಿಂದ ಸಂಗ್ರಹಿಸುತ್ತಿರುವುದು ಕಂಡುಬರುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ.12 ಮತ್ತು ಪಿ.13 ಫೋಟೋಗಳಲ್ಲಿ ಕಂಡುಬರುವ ಪ್ಲಾಸ್ಟಿಕ್ ಚೀಲ ಮತ್ತು ಬಟ್ಟೆಗಳನ್ನು ನೀವು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿ. ಅವುಗಳನ್ನು ಅಮಾನತುಪಡಿಸಿಕೊಳ್ಳದಿರಲು ಕಾರಣ ಏನು ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ನಿಪಿ.11 ಪಂಚನಾಮೆಯಲ್ಲಿ ಬರೆದಿರುವುದನ್ನು

ಪಂಚರಿಗೆ ಓದಿಸಿ ಕೇಳಿ ಸಹಿ ಪಡೆಯಲಾಗಿದೆ ಎಂದು ಬರೆಯಲಾಗಿದೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮು.ಮಾ.6 ಕಲ್ಲನ್ನು ಇರಿಸಲಾಗಿರುವ ಬಟ್ಟೆಯ ಬ್ಯಾಗ್ ಮತ್ತು ಅದರ ಮೇಲೆ ಅಂಟಿಸಿರುವ ಚೀಟಿ ನಿಪಿ.12 ಮತ್ತು 13 ಫೋಟೋಗಳಲ್ಲಿ ಕಂಡುಬರುವುದಿಲ್ಲ ಎಂದರೆ ಸರಿ. ನೀವು ಯಾವುದೇ ಸ್ವತಂತ್ರ ಸಾಕ್ಷಿದಾರರನ್ನು ಪಂಚನಾವೆಗೆ ಕರೆಸದೇ ಮೃತಳಿಗೆ ಸಂಬಂದಪಟ್ಟವರನ್ನು ಮಾತ್ರ ಕರೆಸಿ ಸಾಕ್ಷಿದಾರರನ್ನಾಗಿ ಮಾಡಿದ್ದೀರಿ ಎಂದರೆ ಸರಿಯಲ್ಲ.

37. ಮು.ಮಾ.4 ಮತ್ತು 5 ನ್ನು ವೈದ್ಯಾಧಿಕಾರಿಗಳು ಸಂಗ್ರಹಿಸಿ ನೀಡಿದ್ದು ಅವುಗಳನ್ನು ನಾನು ಸ್ವೀಕರಿಸುವ ಸಮಯದಲ್ಲಿ ಪಂಚನಾಮೆಯನ್ನು ಜರುಗಿಸಿಲ್ಲ. ಮೃತಳ ಮೈಮೇಲೆ ಇತ್ತು ಎನ್ನಲಾದ ಕಾಲುಂಗುರಗಳನ್ನು ಅಮಾನತುಪಡಿಸಿಕೊಳ್ಳಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ.

38. ನಿಪಿ.3, 4, 6, 12 ಮತ್ತು 13 ಫೋಟೋಗಳನ್ನು ತೆಗೆಯಲಾಗಿದೆ ಎನ್ನಲಾದ ಮೊಬೈಲ್ ಅಥವಾ ಅದರ ಮೆಮೋರಿ ಕಾರ್ಡ್ನನ್ನು ಅಮಾನತುಪಡಿಸಿಕೊಂಡು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಫೋಟೋಗಳನ್ನು ಒಳಗೊಂಡ ಸಿ.ಡಿ. ಯನ್ನು ಹಾಜರುಪಡಿಸಲಾಗಿದೆ ಮತ್ತು ಆ ಬಗ್ಗೆ ದೃಢೀಕರಣ ಪತ್ರವನ್ನು ಸಂಬಂಧಿಸಿದವರಿಂದ ಪಡೆದುಕೊಳ್ಳಲಾಗಿದೆ ಎನ್ನುತ್ತಾರೆ.

39. ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ನ್ಯಾಯಾಧೀಶರಿಂದ ದಾಖಲಿಸಲು ನಿಮಗೆ ತೊಂದರೆ ಇತ್ತೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಆರೋಪಿ ನಿಮಗೆ ನಿಪಿ.29 ರಂತೆ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನೀಡಿಲ್ಲ ಹಾಗಾಗಿ ನೀವು ಆತನನ್ನು ನ್ಯಾಯಾಧೀಶರ ಬಳಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

40. ಶವ ತನಿಖಾ ಕಾಲದಲ್ಲಿ ಕಲಂ 10 ರಲ್ಲಿ ಸಹ ನೀವು ಮೃತಳ ಸಂಬಂಧಿಕರ ಹೇಳಿಕೆಯನ್ನೇ ದಾಖಲಿಸಿದ್ದೀರಿ ಎಂದರೆ ಸರಿ. ಆಸ್ಪತ್ರೆಯಲ್ಲಿ ವೈದ್ಯರು, ದಾದಿಯರು ಇದ್ದರೂ ಸಹ ಉದ್ದೇಶಪೂರ್ವಕವಾಗಿ ಮೃತಳ ಸಂಬಂದಿಕರ ಹೇಳಿಕೆಯನ್ನೇ ಪಡೆದಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಮಾನಸಿಕ ಅಸ್ವಸ್ಥನಾಗಿದ್ದು ನಿಮಗೆ ಆ ಬಗ್ಗೆ ಮಾಹಿತಿ ಇದ್ದರೂ ಸಹ ಆತ ಸಹಜವಾಗಿದ್ದನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

41. ನೀವು ಹಾಜರುಪಡಿಸಿ ಗುರುತಿಸಿದ ಮುದ್ದೆಮಾಲುಗಳಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ಮಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಳ್ಳಲು 3 ರಿಂದ 4 ದಿನಗಳು ತಡವಾಗಿದ್ದು ಆ ರೀತಿ ವಿಳಂಬವಾಗಲು ಕಾರಣ ಏನು ಎಂದು ಕೇಸ್ ಡೈರಿಯಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

42. ಫ್ರಾಸಾ.2 ಮತ್ತು ಚಾಸಾ.10 ರವರ ಹೇಳಿಕೆಗಳನ್ನು ಕೂಡಲೇ ನ್ಯಾಯಾಧೀಶರಿಂದ ದಾಖಲಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಅವರ ಹೇಳಿಕೆಯನ್ನು ನಾನು ನ್ಯಾಯಾಧೀಶರಿಂದ ದಾಖಲಿಸಿಕೊಂಡಿಲ್ಲ ಎನ್ನುತ್ತಾರೆ.

43. ಆರೋಪಿಯ ಸ್ವಇಚ್ಛಾ ಹೇಳಿಕೆಯ ಮೇರೆಗೆ ಪಂಚನಾಮೆ ಕ್ರಮವನ್ನು ಜರುಗಿಸಲು ಚಾಸಾ.7 ಮತ್ತು ಫ್ರಾಸಾ.5 ರವರಿಗೆ ನಿಪಿ.10 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಠಾಣೆಗೆ ಬರಮಾಡಿಕೊಂಡಿದ್ದಾಗಿ, ನಂತರ ಆರೋಪಿ ನಿಮ್ಮನ್ನು ಮತ್ತು ಪಂಚರನ್ನು ಚಿಕ್ಕಮಗಳೂರು ನಗರದ ಐ.ಜಿ.ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ ಹತ್ತಿರಕ್ಕೆ ಕರೆದುಕೊಂಡು ಹೋಗಿ ಸದರಿ ಸ್ಥಳದಲ್ಲಿ ಹಿಂದಿನ ದಿನ ಅಂದರೆ ಅದೇ ದಿನ ಬೆಳಗಿನ ಜಾವ 2.30 ಗಂಟೆ ಸಮಯದಲ್ಲಿ ರಸ್ತೆ ಬದಿಯಲ್ಲಿ ಮಲಗಿದ್ದ ಹೆಂಗಸಿನ ತಲೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ ಸ್ಥಳ ಅದೇ ಎಂದು ತೋರಿಸಿದ್ದಾಗಿ, ನಂತರ ಮೇಲೆ ಹೇಳಿದ ಪಂಚರ ಸಮಕ್ಷಮ ಆರೋಪಿ ಸದರಿ ಸ್ಥಳದಲ್ಲಿ ಬಿದ್ದಿದ್ದ ಕೆಲವು ಪ್ಲಾಸ್ಟಿಕ್ ಚೀಲಗಳು ಮತ್ತು ಬಟ್ಟೆಗಳನ್ನು ಸರಿಸಿ ಅಲ್ಲಿ ಇಟ್ಟಿದ್ದ ಮು.ಮಾ.6 ಸೈಜ್ ಕಲ್ಲನ್ನು ತೋರಿಸಿ ಅದೇ ಕಲ್ಲಿನಿಂದ ತಾನು ಮೇಲೆ ಹೇಳಿದಂತೆ ಮಹಿಳೆಯ ತಲೆಗೆ ಜಜ್ಜಿ ಕೊಲೆ ಮಾಡಿದ್ದಾಗಿ, ನಂತರ ಅದನ್ನು ಯಾರಿಗೂ ಕಾಣದಂತೆ ಅಲ್ಲಿ ಮುಚ್ಚಿಟ್ಟಿದ್ದಾಗಿ ನುಡಿದು ಹಾಜರುಪಡಿಸಿದ್ದಾಗಿ, ಸದರಿ ಕಲ್ಲನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ಕಟ್ಟಿ ಅದರ ಮೇಲೆ 'ಪಿ'

ಎಂಬ ಸೀಲನ್ನು ಹಾಕಿ ಪ್ಯಾಕ್ ಮಾಡಿ ಅಮಾನತು ಪಡಿಸಿಕೊಂಡಿದ್ದಾಗಿ, ಅದರ ಮೇಲೆ ಕೇಸಿನ ವಿವರ, ಪಂಚರ, ಆರೋಪಿಯ ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿದ್ದಾಗಿ, ಆ ಬಗ್ಗೆ ಮಧ್ಯಾಹ್ಣ 3.30 ರಿಂದ 4.30 ಗಂಟೆಯವರೆಗೆ ನಿಪಿ.11 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ, ಸದರಿ ಪಂಚನಾಮೆಗೆ ಪಂಚರ ಮತ್ತು ಆರೋಪಿಯ ಸಹಿಗಳನ್ನು ಪಡೆದಿದ್ದಾಗಿ, ಸದರಿ ಪಂಚನಾಮೆಯ ಸಮಯದಲ್ಲಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿದ್ದಾಗಿ, ನಿಪಿ.12 ಮತ್ತು ಪಿ.13 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ, ಸದರಿ ಫೋಟೋಗಳಲ್ಲಿ ನಿಮ್ಮ, ಚಾಸಾ.7, ಪ್ರಾಸಾ.5, ಆರೋಪಿಯ ಮತ್ತು ಆರೋಪಿ ತೋರಿಸಿ ಹಾಜರುಪಡಿಸಿದ ಕಲ್ಲಿನ ಇರುವಿಕೆ ಕಂಡುಬರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

44. ನಿಪಿ.6 ಫೋಟೋದಲ್ಲಿ ಸೊಕೋ ಅಧಿಕಾರಿಗಳ ಇರುವಿಕೆ ಕಂಡುಬರುವುದಿಲ್ಲ ಎಂದರೆ ಸಾಕ್ಷಿ ನಾನು ಅವರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಯಾವುದೇ ಸಾಕ್ಷಿದಾರರ ಅಥವಾ ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ.6 ರ ಮೇಲೆ ಮೃತಳಿಗೆ ಸಂಬಂದಿಸಿದ ಕೂದಲು ಇರುವುದು ಕಂಡುಬಂತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.ಮೃತಳಿಗೆ ಮದ್ಯಪಾನ ಮಾಡುವ ಅಭ್ಯಾಸವಿದ್ದು ಆಕೆ ಮದ್ಯವನ್ನು ಸೇವಿಸಿ ಸದರಿ ಕಲ್ಲಿನ ಮೇಲೆ ಬಿದ್ದು ಮೃತಪಟ್ಟಿರುವುದು ನಿಮ್ಮ ತನಿಖೆಯಲ್ಲಿ ಕಂಡುಬಂತು ಎಂದರೆ

ಸರಿಯಲ್ಲ.

45. ಆರೋಪಿ ಬೈಪೋಲಲರ್ ಡಿಸ್ ಅರ್ಡರ್ ನಿಂದ ಬಳಲುತ್ತಿದ್ದರೂ ಸಹ ನೀವು ಆತನಿಗೆ ಚಿಕಿತ್ಸೆ ಕೊಡಿಸದೇ ಸುಳ್ಳು ನಿಟ್ಟಿನಿಂದ ಆತನ ವಿರುದ್ಧ ತನಿಖೆ ಮಾಡಿದ್ದೀರಾ ಎಂದರೆ ಸರಿಯಲ್ಲ. ಮೃತಳ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ